ಪಿ.ಡಬ್ಲೂಃ 1

ದಿನಾಂಕಃ **03.05.2025** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು:- ಪ್ರತಿವಾದಿ ನಂ.1 ಮತ್ತು 2 ರವರ ಪರವಾಗಿ Sri. JDD, ವಕೀಲರಿಂದ

1. ನನ್ನ ತಂದೆ ಮಲಕಾಜಪ್ಪ, ಸದರಿಯವರಿಗೆ 5 ಜನ ಗಂಡು ಮಕ್ಕಳು ಮತ್ತು 2 ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ತಂದೆ 1971 ರಲ್ಲಿ ಮರಣ ಹೊಂದಿರುತ್ತಾರೆ, ದಿನಾಂಕ ನನಗೆ ನೆನಪಿರುವುದಿಲ್ಲ. ನನ್ನ ತಂದೆಯ ಮರಣಾ ನಂತರ ನಾನು ಮತ್ತು ಉಳಿದ ಸಹೋದರರು ವಾರಸಾ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇವೆ. ಸದರಿ ವಾರಸಾ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾವು ಮಲಕಾಜಪ್ಪನ ವಾರಸುದಾರರು ಇರದೆ ಇರುವುದರಿಂದ ದಾಖಲೆಯನ್ನು ಪಡೆಯದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ತಂದೆಗೆ ಸರ್ವೇ ನಂ.96 ಮತ್ತು 3/3 ಜಮೀನು, 20 ಗುಂಟೆ ಹಿತ್ತಲು ಜಾಗ, ಒಂದು ಮನೆ ಇತ್ತು. ನನ್ನ ತಂದೆಯ ಮರಣಾ ನಂತರ ಈ ನಾಲ್ಕು ಆಸ್ತಿಗಳಿಗೆ ನಾನು ವಾರಸಾ ನಾತೆಯಂತೆ ಅರ್ಜಿ ನೀಡಿ ಬದಲಾವಣೆ ಮಾಡಿಕೊಂಡಿಲ್ಲ ಎಂದರೆ ಸರಿ. ನನ್ನ ತಂದೆಯ ಮರಣಾ ನಂತರ ವಾರಸಾ ನಾತೆಯಂತೆ ಖಾತೆ ಬದಲಾವಣೆ ಮಾಡಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

3. ನಾನು ಮಲಕಾಜಪ್ಪನ ವಾರಸುದಾರ ಇರದೆ ಇರುವ ಕಾರಣ ದಾಖಲೆಯನ್ನು ಬದಲಾವಣೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ

ತಂದೆಯ ಸರ್ವೇ ನಂ.96 ಕ್ಕೆ ಸಂಬಂಧಿಸಿದಂತೆ ಶಿದ್ದಪ್ಪ ಮುಂಡರಗಿ ರವರಿಗೆ ಒಂದು ಖರೀದಿ ಕರಾರು ಪತ್ರವನ್ನು ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಶಿದ್ದಪ್ಪ ಮುಂಡರಗಿ ಕರಾರು ಪತ್ರದ ಕುರಿತು ಅಸಲು ದಾವೆ ಸಂಖ್ಯೆ 103/18 ರಂತೆ ದಾವೆ ದಾಖಲು ಮಾಡಿರುತ್ತಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸುಳ್ಳು ದಾವೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾವೆಯು ಪ್ರಸ್ತುತ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ.

4. ಸರ್ವೇ ನಂ.96 ಕ್ಕೆ ಸಂಬಂಧಿಸಿದಂತೆ ದಾವೆ ಮಾಡಿರುತ್ತೇವೆ ಎಂದರೆ ಸರಿ. ಸರ್ವೇ ನಂ.96 ಕ್ಕೆ ಸಂಬಂಧಿಸಿದಂತೆ ದಾವೆಯನ್ನು ಈ ದಾವೆಯ ಪೂರ್ವದಲ್ಲಿ ಮಾಡಿರುತ್ತೇವೆ. ಸರ್ವೇ ನಂ.96 ನ್ನು ಸೇರಿದ ದಾವೆಯಲ್ಲಿ ಈ ಪ್ರಕರಣದ ದಾವಾ ಆಸ್ತಿಯನ್ನು ಸೇರಿಸಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ಈ ದಾವಾ ಆಸ್ತಿಯನ್ನು ಸೇರಿಸಲು ಯಾವುದೇ ತೋಂದರೆ ಇರಲಿಲ್ಲ. ಸರ್ವೇ ನಂ.96 ಕ್ಕೆ ಸಂಬಂಧಿಸಿದ ದಾವೆಯನ್ನು ಮಾಡುವ ಕಾಲಕ್ಕೆ ಈ ಪ್ರಕರಣದ ದಾವಾ ಆಸ್ತಿಯು ನಮ್ಮ ಕುಟುಂಬದ ಆಸ್ತಿ ಎಂದು ಮಾಹಿತಿ ಇತ್ತು ಎಂದರೆ ಸರಿ.

5. ಈ ಪ್ರಕರಣದ ದಾವಾ ಆಸ್ತಿಯಲ್ಲಿ ವಿಭಾಗ ಬೇಕು ಎಂದು ಕೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳ ಮಾಹಿತಿ ನನಗೆ ಇರುತ್ತದೆ. ನಿಪಿ.3 ರಿಂದ ನಿಪಿ.7 ರ ಪ್ರಕಾರ ಸರ್ವೇ ನಂ.3/3 ರ ಆಸ್ತಿಯು 1966 ರಿಂದ 2004 ರವರೆಗೆ ಸಣ್ಣಪಕ್ಕಿರಪ್ಪ ಅಡಿವೆಪ್ಪ ಗುಂಡೂರ ರವರ ಆಸ್ತಿ ಎಂದರೆ ಸರಿಯಲ್ಲ.

6. ದಾವಾ ಆಸ್ತಿಯು ನನ್ನ ತಂದೆಗೆ ಸಂಬಂಧಿಸಿದ್ದು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಮೂಲ ಮಾಲೀಕ ಪಕ್ಕಿರಪ್ಪ ಮಲಕಾಜಪ್ಪ ಘಟ್ಟರಡ್ಡಿಹಾಳ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣಾ ನಂತರ ಅವರ ಮಕ್ಕಳು ಒಟ್ಟು ಕುಟುಂಬದಲ್ಲಿ ಇದ್ದರು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುವ ಬಗ್ಗೆ ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮನೆಯಲ್ಲಿ ಇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಒಟ್ಟು ಕುಟುಂಬದ ಸ್ವಾಧೀನದಲ್ಲಿ ಇರದೆ ಇರುವ ಕಾರಣ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ.

7. ನನ್ನ ತಂದೆಯ ಮರಣಾ ನಂತರ ನಾನು ಮತ್ತು ನನ್ನ ಸಹೋದರರರು ಸುಮಾರು 4-5 ವರ್ಷಗಳ ನಂತರ ಬೇರೆ ಬೇರೆಯಾಗಿ ವಾಸಿಸುತ್ತಿದ್ದೇವೆ. ಬೇರೆ ಬೇರೆಯಾಗಿ ವಾಸಿಸುತ್ತಿರುವ ಕಾರಣ ನಾವು ನಮ್ಮ ಕುಟುಂಬದ ವ್ಯವಹಾರಗಳನ್ನು ಪ್ರತ್ಯೇಕವಾಗಿ ವ್ಯವಹರಿಸುತ್ತೇವೆ ಎಂದರೆ ಸರಿ. ನಾನು ಮತ್ತು ನನ್ನ ಸಹೋದರರರು ಬೇರೆ ಬೇರೆಯಾದ ಮೇಲೆ ಒಟ್ಟು ಕುಟುಂಬದಲ್ಲಿ ಇಲ್ಲ ಎಂದರೆ ಸರಿ.

<u>ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ ಸಮಯ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.</u>

<u>(ನನ್ನ ಉಖ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)</u>

ಓ.ಹೇಳಿ.ಕೇ.ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಲಕ್ಷ್ಮೇಶ್ವರ